ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವುದು.

133 (552) : ಶ್ರೀ ಪಾಟೀಲ್ ಡಿ.ಆರ್. (ಗದಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಜನವಸತಿ ಗ್ರಾಮಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ರಾಜ್ಯದಲ್ಲಿರುವ ಲಂಬಾಣಿ ತಾಂಡಾಗಳೆಷ್ಟು;

ಇ) ಇವುಗಳಲ್ಲಿ ಕಂದಾಯ ಗ್ರಾಮಗಳಾಗಿ ಪರಿವರ್ತನೆಗೊಂಡಿರುವ ತಾಂಡಾಗಳು ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಈ) ಉಳಿದ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಊ) ರಾಜ್ಯದ ಎಲ್ಲಾ ತಾಂಡಾಗಳನ್ನು ಕಾಲಮಿತಿಗೊಳಪಟ್ಟು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1,801

ಇ) 353

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಈಗ ಕೇಂದ್ರ ಸರ್ಕಾರದ ಚುನಾವಣಾ ಆಯೋಗವು ಲೋಕಸಭೆ ಹಾಗೂ ರಾಜ್ಯ ವಿಧಾನಸಭಾ ಕ್ಷೇತ್ರಗಳ ಪುನರ್ವಿಂಗಡನಾ ಕಾರ್ಯ ಪೂರ್ಣಗೊಳ್ಳುವವರೆಗೆ ರಾಜ್ಯದ ಆಡಳಿತಾತ್ಮಕ ಘಟಕಗಳಾದ ಜಿಲ್ಲೆ, ತಾಲ್ಲೂಕು, ಗ್ರಾಮ, ವಾಡ ಇತ್ಯಾದಿಗಳ ಸ್ಥಾನ/ಎಲ್ಲೆಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ನಿರ್ಬಂಧ ವಿದಿಸಿದೆ. ಈ ನಿರ್ಬಂಧವನ್ನು ಕೇಂದ್ರ ಸರ್ಕಾರವು ಹಿಂದಕ್ಕೆ ಪಡೆದ ನಂತರ ಉಳಿದ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಉ) ಮತ್ತು ಊ) ಮೇಲೆ ನೀಡಲಾದ ಉತ್ತರದಿಂದ ಉದ್ಭವಿಸುವುದಿಲ್ಲ.

12.30 P.M.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು Delimitation Commission ಸಲುವಾಗಿ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಬಾರದು ಎಂದು ಹೇಳಿದ ಪ್ರಯುಕ್ತ ನೀವು ಏನೂ ಕ್ರಮ ತೆಗೆದುಕೊಂಡಿಲ್ಲವೆಂದರೆ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಮೊನ್ನೆ ನಗರಸಭೆ ಚುನಾವಣೆಗಳನ್ನು 2000 ರ ಡೀಲಿಮಿಟೇಷನ್ ಪ್ರಕಾರ ಮಾಡಬೇಕೆಂದಾಗ, ನೀವು 2001 ಜನಸಂಖ್ಯೆ ಆಧಾರವನ್ನು ತೆಗೆದುಕೊಂಡು ವಾರ್ಡ್ ಡೀಲಿಮಿಟೇಷನ್ ಮಾಡಬೇಕು,

ಡೀಲಿಮಿಟೇಷನ್ ಕಮಿಷನ್‌ನವರಿಗೆ ವಾರ್ಡ್ ಬದಲಿ ಮಾಡಬಾರದು ಎಂದು ಹೇಳುವಂತಹ ಕಾನೂನಿನ ಹಕ್ಕಿಲ್ಲ. ಅವರು ಸುಮ್ಮನೆ ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಅವರಿಗೆ ಕಾನೂನಿನ ಹಕ್ಕಿಲ್ಲ, ಅದಕ್ಕೆ ನೀವು ನಿಲ್ಲಿಸತಕ್ಕದ್ದಲ್ಲ ಎಂದು ಹೈಕೋಟ್ ಜಡ್ಜ್‌ಮೆಂಟ್ ಆಗಿದೆ. ಅದರ ಮೇಲೆ ನೀವು ನಗರಸಭೆ ಚುನಾವಣೆಗಳನ್ನು ಡೀಲಿಮಿಟೇಷನ್ ಮಾಡಿಯೇ ಮಾಡಬೇಕೆಂದು ಪೋಸ್ಟ್‌ಪೋನ್ ಮಾಡಿದ್ದೀರಿ. ಈ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡುವುದಕ್ಕೆ ಏನು ತೊಂದರೆ ಇದೆ? ಈ ಕೆಲಸವನ್ನು ಮುಂದೆ ಹಾಕುವುದಕ್ಕೆ ಇಲಾಖೆಯವರು ಎಲ್ಲಾ ಏನು ಹಗುರ ಕೆಲಸ ಇದೆ ಅದನ್ನು ಮಾಡುತ್ತಾರೆ, ದಯವಿಟ್ಟು ಅವರಿಗೆ ಹೇಳಿ. ಮತ್ತು ತಮಗೆ ಗೊತ್ತಿದ್ದ ಪ್ರಕಾರ Grama Panchayath is a lowest administrative Unit ಅಂತ ಪೇಳಿ ಡೀಲಿಮಿಟೇಷನ್ ಕಮಿಷನ್‌ನವರು ಒಪ್ಪಿಕೊಂಡಿದ್ದಾರೆ. ಈ ಲಂಬಾಣಿ ತಾಂಡಾಗಳು ಯಾವುದಾದರು ಒಂದು ಗ್ರಾಮಕ್ಕೆ ಸೇರಿಕೊಂಡಿರುತ್ತದೆ. ಅದನ್ನು ಒಂದು ಇಂಡಿಪೆಂಡೆಂಟ್ ಗ್ರಾಮ ಎಂದು ಮಾಡಿದರೆ ಅದು ಆ ಗ್ರಾಮಪಂಚಾಯತ್ ವ್ಯಾಪ್ತಿಯೊಳಗೆ ಬರುತ್ತದೆ. ಇದರಿಂದ ಏನೂ ತೊಂದರೆಯಾಗುವುದಿಲ್ಲ. ದಯವಿಟ್ಟು ಅದನ್ನು ಡಿಕ್ಲೇರ್ ಮಾಡುವುದಕ್ಕೆ ಹೇಳಿ, ಅದರಿಂದ ಆ ಲಂಬಾಣಿ ತಾಂಡಾಗಳಲ್ಲಿ ಇರುವಂತಹ ಜನರಿಗ ಬಹಳ ಅನುಕೂಲವಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾದಂತಹ ಡಿ.ಆರ್. ಪಾಟೀಲ್‌ರವರು ಏನು ಈ ಪ್ರಶ್ನೆ ಎತ್ತಿದ್ದಾರೆ, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದೇನಿದೆ ಅದಕ್ಕೆ ಒಂದು ಗೈಡ್‌ಲೈನ್ ಇದೆ. ಯಾವ ಲಂಬಾಣಿ ತಾಂಡಾದಲ್ಲಿ 500 ಕ್ಕಿಂತ ಹೆಚ್ಚು ಜನಸಂಖ್ಯೆ ಇದೆಯೋ ಅಥವಾ 100 ಕುಟುಂಬಗಳು ಆ ತಾಂಡಾದಲ್ಲಿ ಇದೆಯೋ, ಅಂತಹವುಗಳನ್ನು ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ನಮ್ಮ ನಿಯಮದಲ್ಲೆ ಅವಕಾಶ ಇದೆ. ಆ ನಿಯಮದಡಿಯಲ್ಲಿ ಯಾವ್ಯಾವ ತಾಂಡಾಗಳು ಬರುತ್ತವೆ, ಅವುಗಳನ್ನು ಪರಿವರ್ತನೆ ಮಾಡುವುದಕ್ಕೆ ಸರ್ಕಾರ ಅದರ ಪರವಾಗಿದೆ. ಇದರ ಬಗ್ಗೆ ಎರಡು ಮಾತಿಲ್ಲ. ಆದರೆ ಡೀಲಿಮಿಟೇಷನ್ ಕಮಿಷನ್‌ರವರು ಏನು ನಮ್ಮ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಪತ್ರ ಬರೆದಿದ್ದಾರೆ. ಅದನ್ನು ಇಲ್ಲಿ ಎರಡು ವಾಕ್ಯಗಳನ್ನು ಓದುತ್ತೇನೆ. 'directing all the State Governments not to alter or change boundaries of various administrative units including the municipal corporation wards as on 15th February 2004, till the de-limitations in the State is finally notified is being sent for your reference'. ಹೀಗಾಗಿ ಈ ರೀತಿಯಾಗಿ ಡೀಲಿಮಿಟೇಷನ್ ಕಮಿಷನ್‌ರವರು ಸೂಚನೆ ಕೊಟ್ಟಿದ್ದರಿಂದ, ಅದಕ್ಕೆ ತೊಂದರೆಯಾಗಿದೆಯೇ ಹೊರತು ಆ ತಾಂಡಾಗಳನ್ನು ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಯಾವುದೇ ರೀತಿಯಾದಂತಹ ರಿಸ್ಟ್ರಿಕ್ಷನ್ ಇಲ್ಲ. ಮತ್ತು ಸರ್ಕಾರ ಅದರ ಪರವಾಗಿದೆ. ಡಿಲಿಮಿಟೇಷನ್

ಕಮಿಟಿಯವರು 28ನೇ ತಾರೀಖು ಒಂದು ಮೀಟಿಂಗ್ ಇದೆ. ಆ ಮೀಟಿಂಗ್ ಆಯಿತೆಂದರೆ ಆ ತಾಂಡಾಗಳನ್ನು ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದರ ಬಗ್ಗೆ ಸರ್ಕಾರ ಒಂದು ನಿರ್ಣಯ ಕೈಗೊಳ್ಳುತ್ತದೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಇದನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡಿಲ್ಲವೆಂದು ನಾನು ತಿಳಿಯುತ್ತೇನೆ. ನಾನೂ ಕೂಡ ಒಂದು ವರ್ಷ ಕಂದಾಯ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದೇನೆ. ಹಾಗೂ ಈ ರಾಜ್ಯದ ಗೃಹಸಚಿವನಾಗಿ ಕೆಲಸ ಮಾಡಿದ್ದೇನೆ. ಇವತ್ತು ರಾಜ್ಯದಲ್ಲಿರುವಂತಹ ತಾಂಡಾಗಳು ಏನಿವೆ, ಅವುಗಳನ್ನು ಗ್ರಾಮಗಳನ್ನಾಗಿ ಪರಿವರ್ತನೆ ಮಾಡಬೇಕೆನ್ನುವುದು ಮಾನ್ಯ ದೇವರಾಜು ಅರಸು ಅವರ ಕಾಲದಿಂದ ಇದೆ. ನಾವೂ ಕೂಡ ರಾಜ್ಯ ಸರ್ಕಾರದ ಕಡೆಯಿಂದ ಲಂಬಾಣಿ ತಾಂಡಾ ಎನ್ನುವುದನ್ನು ಗ್ರಾಮ ಎಂದು ಡಿಕ್ಲೇರ್ ಮಾಡಬೇಕಾದರೆ, you have to take the permission from the Union Government. ಇವತ್ತು ಗೃಹ ಸಚಿವರ ಅನುಮೋದನೆ ಪಡೆದು ಆ ಇಲಾಖೆಗೆ ಹೋಗಿ ಮಾತುಕತೆ ಮುಖಾಂತರ ಬಗೆಹರಿಯತಕ್ಕಂಥ ಕೆಲಸ. ಡೀಲಿಮಿಟೇನ್ಸ್‌ಗೆ, ಇದಕ್ಕೆ ಏನೂ ಸಂಬಂಧ ಇಲ್ಲ. ಮೊನ್ನೆ ಹೊಸ ಸರ್ಕಾರ ಬಂದ ಮೇಲೆ ನಿಮ್ಮ ಸಮ್ಮಿಶ್ರ ಸರ್ಕಾರ ಲಂಬಾಣಿ ತಾಂಡಾಗಳಿಗೆ ಹಾಗೂ ಗ್ರಾಮದ ಅಭಿವೃದ್ಧಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಲಂಬಾಣಿ ತಾಂಡಾಗಳ ಜನಕ್ಕೆ ಇರುವಂತಹ ಸಮಸ್ಯೆಗಳ ಬಗ್ಗೆ ಸ್ಪಂದಿಸುತ್ತಿದ್ದೇವೆ ಎಂದು ಹೇಳಿದ್ದೀರಿ. ಡೀಲಿಮಿಟೇಷನ್ ಕಾನ್ಸ್‌ಟಿಟ್ಯೂಯೆನ್ಸಿಗೆ ಯಾವ ರೀತಿ ಬಂದಿದೆ ಅದರಿಂದ ತಾವೂ ದೂರ ಸರಿಯತಕ್ಕಂಥ ರೀತಿಯಲ್ಲಿ ಒಂದು ನೆಪ ಅಷ್ಟೆ. ಆದರೆ ಮಾನ್ಯ ಅಧ್ಯಕ್ಷರ ಮೂಲಕ ನಾನು ತಮಗೆ ಒಂದು ವಿಚಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ತಮಗೆ ಕೂಡ ಉತ್ಸಾಹದಿಂದ ಕೆಲಸ ಮಾಡತಕ್ಕಂಥ ಭಾವನೆ ಇದೆ. ಇವತ್ತು ಲಂಬಾಣಿ ತಾಂಡ ಮತ್ತು ಗೊಲ್ಲರ ಹಟ್ಟಿಗಳನ್ನು ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಪ್ರಪೋಸಲ್ ಮಾಡಿ, ಯಾವ್ಯಾವ ಪ್ರಪೋಸಲ್ ಹೋಗಿದೆ ಅಲ್ಲಿ ಸನ್ಮಾನ್ಯ ಶಿವರಾಜ್‌ಪಾಟೀಲ್ ನಮ್ಮವರೆ ಆದವರು ಗೃಹಸಚಿವರಾಗಿದಾರೆ. ಅವರನ್ನು ಭೇಟಿಯಾಗಬೇಕು. ಲಂಬಾಣಿ ತಾಂಡಾಗಳ ಜನರ ದೃಷ್ಟಿಯಿಂದ ಹಾಗೂ ರಾಜ್ಯದ ಜನರ ಹಿತದೃಷ್ಟಿಯಿಂದ ಗ್ರಾಮಗಳನ್ನಾಗಿ ಮಾಡಬೇಕಾಗಿರುತ್ತದೆ. ತಾವು ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು Municipal Ward ಗಳನ್ನು 2001 ರ ಸೆನ್ಸಸ್ ಪ್ರಕಾರ ಡೀಲಿಮಿಟೇಷನ್ ಮಾಡಿ ಚುನಾವಣೆ ಮಾಡಿ ಎಂದು ಹೈಕೋರ್ಟ್ ಹೇಳಿದ್ದಕ್ಕೆ ಒಪ್ಪಿ ನಿಮ್ಮ ಅರ್ಬನ್ ಡೆವಲಪ್‌ಮೆಂಟ್ ಇಲಾಖೆಯವರು ಒಂದು ಆದೇಶವನ್ನು ಹೊರಡಿಸುತ್ತಾರೆ. ಹೈಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ನಾವು ಡೀಲಿಮಿಟೇಷನ್ ಮಾಡುತ್ತೇವೆ ನಂತರ ಚುನಾವಣೆಯನ್ನು ಮಾಡುತ್ತೇವೆಂದು ಆದೇಶ ಹೊರಡಿಸುತ್ತಾರೆ. ಅರ್ಬನ್ ಏರಿಯಾದಲ್ಲಿ

you are ready to defy the de-limitation commission's suggestions. ಆದರೆ ಗ್ರಾಮೀಣ ಭಾಗ ಎಂದಕೂಡಲೆ ಅದನ್ನು ಪೋಸ್ಟ್‌ಪೋನ್ ಮಾಡುವ ಸಲುವಾಗಿ ಈ ರೀತಿ ಅಧಿಕಾರಿಗಳು ಮಾಡುತ್ತಾರೆ ಎಂಬ ಸಂಶಯ ನನಗೆ ಬಂದಿದೆ. ದಯವಿಟ್ಟು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದಕ್ಕೆ ಹಾಗೂ ಡೀಲಿಮಿಟೇಷನ್ ಪ್ರೋಸೆಸ್‌ಗೆ ಏನು ಅಡ್ಡ ಬರುವುದಿಲ್ಲ. ನೀವು ಇದನ್ನೆಲ್ಲಾ ತಯಾರು ಮಾಡಿ ಎಂದು ಹೇಳಿ. ನಿಮಗೆ ಡೀಲಿಮಿಟೇಷನ್ ಸಜೆಷನ್ ಅನ್ನು ನಾನು ಮೀರುವುದಕ್ಕಾಗುವುದಿಲ್ಲ ಎನ್ನುವಂತಹ hesitation ತಮಗೆ ಇದ್ದರೆ ಈ ಪ್ರೋಸೆಸ್ ಅನ್ನು ಕಂಪ್ಲೀಟ್ ಮಾಡಿ. ಆದರೆ ಅನೌನ್ಸ್ ಬೇಕಾದರೆ ಆಮೇಲೆ ಮಾಡಿವಿರಂತೆ. ಈ ಪ್ರೋಸೆಸ್ ಆದರೂ ಕಂಪ್ಲೀಟ್ ಆಗಬೇಕಲ್ಲಾ. ಡೀಲಿಮಿಟೇಷನ್ ಕಮಿಷನ್‌ನವರಿಗೆ ಹೈಕೋರ್ಟ್‌ನವರು; they have no legal sanctity to direct this. ಎಂದು ಹೇಳಿದ್ದಾರೆ. ನೀವು ಅದನ್ನು ಒಪ್ಪಿಕೊಂಡು ಅರ್ಬನ್ ಎಲೆಕ್ಷನ್ ಮುಂದೆ ಹಾಕುತ್ತೀರಿ. ಡೀಲಿಮಿಟೇಷನ್ ಮಾಡಿದ ಮೇಲೆ ಮಾಡುತ್ತೇವೆ ಎಂದು. ಆದರೆ ಇಲ್ಲಿ ಮಾತ್ರ ಅದರ ಕೆಳಗೆ ಶೆಲ್ಟರ್ ತೆಗೆದುಕೊಳ್ಳುತ್ತೀರಿ. ದಯವಿಟ್ಟು ಇದು ಆಗಬಾರದು. ಇನ್ನೊಂದು ನಮ್ಮ ಕಡೆ ಮಜಿರೆ ಗ್ರಾಮ ಎಂದು ಇದೆ. ಆ ಮಜಿರೆ ಗ್ರಾಮವನ್ನೂ ಸಹ ನೀವು ಇಂಡಿಪೆಂಡೆಂಟ್ ಗ್ರಾಮ ಎಂದು ಅವುಗಳನ್ನು ರೆಕಗ್ನೈಜ್ ಮಾಡಿ ಎಲ್ಲಾ ಅನುಕೂಲತೆಗಳನ್ನು ಅವುಗಳಿಗೆ ಕಲ್ಪಿಸಿಕೊಡಬೇಕಾಗುತ್ತದೆ. ತಾಂಡಾಗಳ ರೀತಿಯಲ್ಲಿ ಈ ಮಜಿರೆ ಗ್ರಾಮವನ್ನೂ ಕೂಡ ಇಂಡಿಪೆಂಡೆಂಟ್ ಗ್ರಾಮ ಎಂದು ತಾವು ರೆಕಗ್ನೈಜ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ಡಿ.ಆರ್. ಪಾಟೀಲ್‌ರವರು ಎತ್ತಿರುವಂತಹ ಪ್ರಶ್ನೆ ಮೂಲಭೂತವಾಗಿ ಲಾಂಬಾಣಿ ತಾಂಡಾಗಳು ಸರ್ಕಾರದ ಸವಲತ್ತುಗಳಿಂದ ವಂಚಿತವಾಗಿರುವಂತಹ ತಾಂಡಾಗಳು. ಅದು ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಶಾಖಾ ಕಟ್ಟಡಗಳ ವ್ಯವಸ್ಥೆ ಇರಬಹುದು ಹಾಗೂ ರಸ್ತೆ ಸಂಪರ್ಕದ ಕೊರತೆ ಇರಬಹುದು, ಇವೆಲ್ಲಾ ಸಮಸ್ಯೆಗಳಿಂದ ವಂಚಿತರಾಗಿರುವಂತಹ ತಾಂಡಾಗಳಾಗಿವೆ. ಕಳೆದ ಸರ್ಕಾರದಲ್ಲಿ ತಾಲ್ಲೂಕಿಗೆ ಐದರಿಂದ ಏಳೆಂಟು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಿ ಸರ್ಕಾರ ಆದೇಶ ಹೊರಡಿಸಿ, ಅವುಗಳಿಗೆ ಏನೇನು ಮೂಲಭೂತ ಸೌಕರ್ಯಗಳು ಬೇಕೋ ಅದರ ಕಡೆ ಸರ್ಕಾರ ಕಾರ್ಯಪ್ರವೃತ್ತರಾಗಿತ್ತು ತದನಂತರ ಅಧಿಕಾರಿಗಳ ಜೊತೆಗೂಡಿ ಹಿಂದಿನ ಮಾನ್ಯ ಕಂದಾಯ ಮಂತ್ರಿಗಳು ನಮ್ಮನ್ನೆಲ್ಲಾ ಕರೆಸಿ ಎರಡು ಮುರು ಮೀಟಿಂಗ್ ಮಾಡಿ, ಅಲ್ಲಿರತಕ್ಕಂಥ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಲಂಬಾಣಿ ಸಮಾಜದ ಶಾಸಕರನ್ನು ಮತ್ತು ಮುಖಂಡರನ್ನು ಕರೆಸಿ ಸಭೆ ಮಾಡಿ ಸಲಹೆಗಳನ್ನು ಪಡೆದಿದ್ದರು. ಆದರೆ ಅದು ಇಲ್ಲಿಯವರೆಗೂ ಕೂಡ ಕಾರ್ಯರೂಪಕ್ಕೆ ಬರಲಿಲ್ಲ. ಮೊನ್ನೆ ಮಾನ್ಯ ಜಗದೀಶ್ ಶೆಟ್ಟರ್ ಹಾಗೂ ನಾವು ಒಂದು ಸಮಾರಂಭದಲ್ಲಿ ಭೇಟಿಯಾದಾಗ ಕೂಡ ಅವರಿಗೆ ನೆನಪು ಮಾಡಿಕೊಟ್ಟೆ. ಸಾರ್, ನಮ್ಮಲ್ಲಿ ಸಮಸ್ಯೆ ಇದೆ ಎಂದು, ಕಡತ ರೆಡಿಯಾಗಿದೆ,

ಈಗ ತಾವೇನು 500 ಜನಸಂಖ್ಯೆ ಇರುವಂತಹ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನು ಆಗಿ ಮಾಡುವಂತಹ ವ್ಯವಸ್ಥೆ ಇದೆ. ಅದಕ್ಕೆ ಚುನಾವಣಾ ಆಯೋಗದ ಡೀಲಿಮಿಟೇಷನ್ ಕಮಿಟಿಯ ತಡೆ ಇದೆ ಎಂದು ಹೇಳುತ್ತಿದ್ದಾರೆ. ಆದರೆ ಅದಕ್ಕೂ ಇದಕ್ಕೂ ಸಂಬಂಧ ಇಲ್ಲದೆ ಇರುವಂತಹ ವಿಚಾರ. ಆದುದರಿಂದ ತಾವು ದಯಮಾಡಿ, ಅವಕಾಶ ಇದೆ, ವ್ಯವಸ್ಥೆ ಇದೆ, ಆ ಜನರಿಗೆ ಸವಲತ್ತು ಕೊಡುವ ಕಡೆ ಸರ್ಕಾರ ಗಮನವನ್ನು ಹರಿಸಬೇಕು, ಇದನ್ನು ಬಹಳ ತ್ವರಿತವಾಗಿ ಈ ಒಂದು ಕೆಲಸಕ್ಕೆ ಚಾಲನೆಯನ್ನು ಕೊಡಬೇಕು ಎನ್ನುವಂತಹ ಮನವಿಯನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ, ಆ ಪ್ರಕಾರ ಮಾನ್ಯ ಡಿ. ಆರ್. ಪಾಟೀಲ್‌ರವರು ಹೇಳಿದಂತೆ ಹೈಕೋರ್ಟ್‌ನಲ್ಲಿ ಏನು ತೀರ್ಮಾನವಾಯಿತು ಸ್ಥಳೀಯ ಸಂಸ್ಥೆಗಳ ಚುನಾವಣೆ ನಗರಸಭೆ ಹಾಗೂ ಮುನಿಸಿಪಾಲಿಟಿಗಳ ಚುನಾವಣೆ ಸಂಬಂಧ, ಅದಕ್ಕೆ ಡೈರೆಕ್ಷನ್ ಕೊಟ್ಟಿದ್ದು 2001 ರ ಸೆನ್ಸಸ್ ಪ್ರಕಾರ ನೀವು ಎಲ್ಲಾ ವಾರ್ಡ್‌ಗಳನ್ನು ಡೀಲಿಮಿಟ್ ಮಾಡಬೇಕು ಎಂದು ಇದ್ದು, ಅದಕ್ಕೆ ಏಕೆ ಅವಕಾಶ ಇದೆ, ಇದಕ್ಕೆ ಏಕಿಲ್ಲವೆಂದು ಹೇಳಿದ್ದಾರೆ. ಹೈಕೋರ್ಟ್‌ನ ಡೈರೆಕ್ಷನ್ ಏನಿದೆ ಅದನ್ನು ನಾನು ಪೂರ್ತಿಯಾಗಿ ತಂದು ಪರಿಶೀಲನೆ ಮಾಡುತ್ತೇನೆ. ಮತ್ತೆ ನಾಳೆ ಅದು ಡೀಲಿಮಿಟೇಷನ್ ಪ್ರಾರಂಭವಾದರೆ ಆಗ ಕೂಡ ಡೀಲಿಮಿಟೇಷನ್ ಕಮಿಟಿಯ ಒಂದು ಸೂಚನೆ ಕೂಡ ಬರಬಹುದು. ಅದು ಬೇರೆ ಮಾತು. ಹೀಗಾಗಿ ಅದರ ಬಗ್ಗೆ ಕೂಡ ಅವಲೋಕನ ಮಾಡುತ್ತೇನೆ. ಹಾಗೂ ಮಾನ್ಯ ಡಿ.ಆರ್. ಪಾಟೀಲ್‌ರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರು, ಆ ಪ್ರಕಾರ ನಾವು ನಗರ ಪ್ರದೇಶಗಳಿಗೆ ಮಹತ್ವ ಕೊಡುತ್ತೇವೆ, ಹಾಗೂ ಗ್ರಾಮೀಣ ಪ್ರದೇಶಗಳಿಗೆ ಮಹತ್ವ ಕೊಡುವುದಿಲ್ಲವೆನ್ನುವಂತಹ ಮಾತು ಸತ್ಯಕ್ಕೆ ದೂರವಾದಂತಾದ್ದು. ಆ ರೀತಿಯ ಭಾವನೆ ನಮ್ಮಲ್ಲಿಲ್ಲ. ಈ ಎಲ್ಲಾ ಲಂಬಾಣಿ ತಾಂಡಾಗಳನ್ನು ಗ್ರಾಮಗಳನ್ನಾಗಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಮತ್ತು ಕೇಂದ್ರ ಸರ್ಕಾರಕ್ಕೆ ಏನು ಸೂಚನೆಗಳು ಹೋಗಬೇಕು. ಅದರ ಬಗ್ಗೆ ಮಾನ್ಯ ಪ್ರತಿಪಕ್ಷದ ನಾಯಕರಾದಂತಹ ಧರ್ಮಸಿಂಗ್‌ರವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಎಲ್ಲವನ್ನೂ ಐಡೆಂಟಿಫೈ ಮಾಡಿ ಗೈಡ್‌ಲೈನ್ಸ್ ಪ್ರಕಾರ ಯಾವ್ಯಾವ ತಾಂಡಗಳು ಬರುತ್ತವೆ, ಆ ಲಿಸ್ಟ್‌ನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುಂತಹ ಪ್ರೋಸೆಸ್ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇನೆ. ಮತ್ತು ಈ ಡೀಲಿಮಿಟೇಷನ್ ಬಗ್ಗೆ ಅವರ ಜೊತೆ ಇನ್ನೊಮ್ಮೆ ಎಲ್ಲಾ ಲಿಸ್ಟ್‌ಗಳನ್ನು ತಯಾರು ಮಾಡಿ ಈ ಒಂದು ವ್ಯವಸ್ಥೆಗೆ ಏನೂ ಅಡೆತಡೆ ಆಗುವುದಿಲ್ಲವೆನ್ನುವ ಸ್ಪಷ್ಟೀಕರಣವನ್ನು ಕೇಳಿ ಅಲ್ಲಿಂದ ಕೂಡ ಒಪ್ಪಿಗೆಯನ್ನು ಪಡೆದುಕೊಂಡು ಆದಷ್ಟು ಬೇಗ ಈ ತಾಂಡಾಗಳನ್ನು ಪರಿವರ್ತನೆ ಮಾಡುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಪರಮೇಶ್ವರ ನಾಯ್ಕ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ಸಮಾಜದ ಕೆಲವು ಪ್ರಮುಖರನ್ನು ಕರೆದು ಇದರ ಬಗ್ಗೆ ಮಾತನಾಡಿ, ವಿಚಾರ ಮಾಡಿ, ಎನ್ನುವ ಮಾತನ್ನು ಹೇಳಿದ್ದರು. ನಾನು ಎಲ್ಲಾ ಪಕ್ಷದ ನಾಯಕರುಗಳ ಮತ್ತು ಸಮಾಜದ ನಾಯಕರುಗಳ ಜೊತೆಗೆ ಸಮಲೋಚನೆಯನ್ನು ಮಾಡಿ, ಒಂದು ಸಭೆಯನ್ನು ಕರೆದು ಆದಷ್ಟು ಬೇಗನೆ ಈ ತಾಂಡಗಳನ್ನು ಐಡೆಂಟಿಫೈ ಮಾಡುವಂಥದ್ದರ ಬಗ್ಗೆ, ಅಂದರೆ ಈ ಗ್ರಾಮೀಣ ಗ್ರಾಮಗಳಾಗಿ ಪರಿವರ್ತನೆ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆಂಬ ವಿಚಾರವನ್ನು ನಾನು ಈ ಸದನದ ಗಮನಕ್ಕೆ ಈಗ ತರುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಮಂತ್ರಿಯವರು ಮಜಿರೆ ಗ್ರಾಮಗಳ ಬಗ್ಗೆ ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆಯೂ ನಾನು ಗಮನಹರಿಸುತ್ತೇನೆ. ಇನ್ನು ಕೆಲವು ಸದಸ್ಯರುಗಳು ಕ್ಯಾಂಪ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವುಗಳು ಈ ಗೈಡ್‌ಲೈನ್ಸ್‌ನಲ್ಲಿ ಬಂದರೆ ಅವುಗಳನ್ನು ಪರಿವರ್ತನೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

(ಪ್ರಶ್ನೆ ಸಂಖ್ಯೆ : 134(555) ಸಂಬಂಧಪಟ್ಟ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

(ಉತ್ತರ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.)

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು : ತಾವು ಈಗ ಸಭೆಗೆ ಬಂದಿದ್ದೀರಿ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಸಭೆಗೆ ಬಂದೆ.

ಅಧ್ಯಕ್ಷರು : ಆಯಿತು, ಪ್ರಶ್ನೆಯನ್ನು ಕೇಳಿ.

ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಬ್ಸಿಡಿ ಹಣದ ಬಾಕಿ ಬಗ್ಗೆ

122 (650) : ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದಿಂದ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವ ಸಬ್ಸಿಡಿ ಹಣ ಬಾಕಿ ಎಷ್ಟಿದೆ;

ಆ) ಸಬ್ಸಿಡಿ ಹಣ ಸಣ್ಣ ಕೈಗಾರಿಕೆಗಳಿಗೆ ದೊರಕದೇ ಕೈಗಾರಿಕೆಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಬಾಕಿಯಿರುವ ಸಬ್ಸಿಡಿ ಹಣವನ್ನು ಯಾವಾಗ ಉದ್ದಿಮೆದಾರರಿಗೆ ಪಾವತಿಸಲಾಗುವುದು;

ಈ) ಬಾಕಿ ಹಣವನ್ನು ಪಾವತಿಸಲು ಸರ್ಕಾರ ಏನಾದರೂ ಕಾಲಮಿತಿಯನ್ನು ನಿಗದಿಗೊಳಿಸಿದೆಯೇ;

ಉ) ಹಾಗಿದ್ದಲ್ಲಿ, ಯಾವಾಗ ಪಾವತಿಸಲಾಗುವುದು?